ಭದ್ರಾ ನದಿ ನೀರು ಕಲುಷಿತವಾಗುತ್ತಿರುವ ಬಗ್ಗೆ

೧೨೬೭ (೨೬೩೪) (ಚಿಕ್ಕಮಗಳೂರು).—ಮಾನ್ಯ ವಿದ್ಯುತ್ ಮತ್ತು ತೋಟಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕುದುರೆ ಮುಕ ಕಬ್ಬಿಣ ಅದಿರು ಯೋಜನೆ ಯಿಂದ ಮತ್ತು ಒಳಚರಂಡಿ ನೀರನ್ನು ಸಹ ಭದ್ರಾ ನದಿಗೆ ಬಿಡುತ್ತಿರುವುದರಿಂದ ಆ ನದಿಯ ನೀರು ಮಲಿನವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕಾ ರಾಜ್ಯ ಮಂತ್ರಿಗಳು).—

(ಅ) ಹೌದು.

(ಆ) ಕುದುರೆ ಮುಖ ಸಂಸ್ಥೆಯು ತನ್ನ ಗೃಹ ಬಳಕೆಯ ಕಲುಷಿತ ನೀರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗದಿ ಪಡಿಸಿರುವ ಗುಣಮಾನಕಗಳಿಗೆ ಶುದ್ಧೀ ಕರಿಸಲು ಪೂರ್ಣ ಪ್ರಮಾಣದ ಸಂಸ್ಕರಣದ ಘಟಕಗಳನ್ನು ಹೊಂದಿದೆ. ಕಬ್ಬಿಣದ ಧೂಳು ಮತ್ತು ಗಣಿಗಳಿಂದ ಹೊರ ಬರುವ ಕಲುಷಿತಗಳನ್ನು ಶೇಖರಿಸಲು ವಿಶೇಷವಾಗಿ ನಿರ್ಮಿಸಲ್ಪಟ್ಟ ಲಕ್ಕಿ ಮತ್ತು ಇತರ ೨ ಅಣೆಕಟ್ಟುಗಳಲ್ಲಿ ಶೇಖರಿಸಲಾಗುತ್ತಿದೆ. ಈ ಅಣೆಕಟ್ಟುಗಳಿಂದ ತುಂಬಿ ಹರಿಯುವ ನೀರು ಭದ್ರಾ ನದಿಯನ್ನು ಸೇರುತ್ತಿದ್ದು ಮಂಡಳಿಯು ನಿಗದಿಪಡಿಸಿರುವ ಗುಣಮಾನಕಗಳಿಗೆ ಸರಿ ಹೊಂದುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾಲಕಾಲಕ್ಕೆ ನದಿಯ ನೀರನ್ನು ಮತ್ತು ಸಂಸ್ಕರಣಗೊಂಡ ಕಲುಷಿತ ನೀರಿನ ಗುಣಮಟ್ಟವನ್ನು ಪರೀಕ್ಷಿಸುತ್ತಿದೆ. ಈ ಪರೀಕ್ಷೆಗಳಿಂದ ನದಿ ನೀರಿನ ಗುಣಮಟ್ಟವು ನಿಗದಿ ಪಡಿಸಿರುವ ಗುಣ ಮಾನಕಗಳಿಗೆ ಸರಿ ಹೊಂದುತ್ತಿದೆ.

ವಿದ್ಯುಚ್ಛಕ್ತಿ ಕಳುವು ಪ್ರಕರಣಗಳು

೧೨೬೮ (೨೪೩೭) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸರಕಾರದ ವಿದ್ಯುಚ್ಛಕ್ತಿ ಕಳುವು ಮಾಡುವ ಅಪರಾಧ ಹುಡುಕಿ ಕೊಟ್ಟವರಿಗೆ ನೀಡಿದ ಬಹುಮಾನದ ಮೊತ್ತವೆಷ್ಟು? ಹಾಗೂ ಅವುಗಳಿಗೆ ಕಾರಣವಾದ ಉದ್ದಿಮೆಗಳು ಯಾವುವು? (ಉದ್ಯಮ ವಾರು ಮತ್ತು ವರ್ಷವಾರು ವಿವರ ನೀಡುವುದು)

ಆ) ಈ ಬಹುಮಾನ ನೀಡುವ ಕ್ರಮದಿಂದ ವಿದ್ಯುತ್ತಿನ ಕಳುವಿನ ಪ್ರಮಾಣ ಕಡಿಮೆಯಾಗಿರುವುದು ಕಂಡು ಬಂದಿದೆಯೇ ? ಹಾಗೂ ಇಂದಿನ ಟ್ರಾನ್ಸ್‌ಮಿಷನ್‌ಲ್ಲಿಯ ಅಪವ್ಯಯ ಪ್ರಮಾಣ ವೆಷ್ಟು? ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರವು ಕ್ರಮ ಕೈಗೊಂಡಿರುವುದೇ ವಿವರ ನೀಡುವುದು?

ಇ) ಸರಕಾರದ ಈ ಪುರಸ್ಕಾರ ಬಹುಮಾನ ಪಡೆದ ವ್ಯಕ್ತಿಗಳು ಯಾರ್ಯಾರು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ವಿದ್ಯುತ್ ಕಳವು ಬಗ್ಗೆ ಸುಳಿವು ನೀಡಿದವರಿಗೆ ಕೊಟ್ಟಿರುವ ಬಹುಮಾನದ ಮೊತ್ತ ೬,೩೦೮ ರೂ.ಗಳು ಇವುಳಗಲ್ಲಿ ೧೪ ಗ್ರಾಹಕರ ಸ್ಥಾವರಗಳು ಇದ್ದು ಪವರ ಅನುಬಂಧದಲ್ಲಿ ನೀಡಿದೆ.

ಆ) ತನಿಖೆ ಮಾಡಿದ ನಂತರ ಆ ಸ್ಥಾವರಗಳ ವೀಟರ್‌ಗಳಲ್ಲಿ ದಾಖಲಾದ ವಿದ್ಯುತ್ ಬಳಕೆಯಲ್ಲಿ ಗಮನಾರ್ಹ ಹೆಚ್ಚಳ ಉಂಟಾಗಿದ್ದು ಮಂಡಳಿಯ ವರಮಾನವೂ ಹೆಚ್ಚಿದೆ ಆದುದರಿಂದ ಬಹುಮಾನ ನೀಡಿಕೆ ಕ್ರಮದಿಂದ ಕಳುವಿನ ಪ್ರಮಾಣ ಕಡಿಮೆಯಾಗುತ್ತಿದೆ.

ವಿದ್ಯುತ್ ಪ್ರಸಾರಣ ಮತ್ತು ವಿತರಣೆಯಲ್ಲಿನ ಒಟ್ಟು ನಷ್ಟ ೧೯೮೭–೮೮ರಲ್ಲಿ ಸುಮಾರು ೨೧೭೬ ದಶಲಕ್ಷ ಯೂನಿಟ್‌ಗಳು (ತಾತ್ಕಾಲಿಕ) ಇದರಲ್ಲಿ ವಿದ್ಯುತ್ ಕಳವೂ ಸೇರಿದೆ. ಆದರೆ ಕಳುವಿನ ಪ್ರಮಾಣ ನಿರ್ಧರಿಸಲು ಸಾಧ್ಯವಿಲ್ಲ.